# ನಿಮ್ಮೊಡನೆ

## ಅಂಗೈ ಹುಣ್ಣಿಗೆ ಕನ್ನಡಿ ಬೇಕೆ?

ರಾಜ್ಯದಲ್ಲಿ ಕೀಚಕರ ದೌರ್ಜನ್ಯ ಮರುಕಳಿಸಿದೆಯೇ? ಮಂಗಳೂರಿನ ಹೋಮ್ ಸ್ಟೇ ಮೇಲೆ ನಡೆದ ದಾಳಿ ಹಾಗೂ ಮದ್ದೂರು ಬಳಿ ಚಲಿಸುವ ರೈಲಿನಿಂದ ಯುವತಿಯನ್ನು ಕೆಳಗೆ ದೂಡಿದ ಘಟನೆಗಳು– ಕಾನೂನನ್ನು ಕೈಗೆ ತೆಗೆದುಕೊಂಡು ಮನಬಂದಂತೆ ವರ್ತಿಸುವ ಅಂಧಯುಗವನ್ನು ನೆನಪಿಗೆ ತಂದಿದೆ.

ರಾಜ್ಯದಲ್ಲಿ ಕೀಚಕರ ದೌರ್ಜನ್ಯ ಮರುಕಳಿಸಿದೆಯೇ? ಮಂಗಳೂರಿನ ಹೋಮ್ ಸ್ಟೇ ಮೇಲೆ ನಡೆದ ದಾಳಿ ಹಾಗೂ ಮದ್ದೂರು ಬಳಿ ಚಲಿಸುವ ರೈಲಿನಿಂದ ಯುವತಿಯನ್ನು ಕೆಳಗೆ ದೂಡಿದ ಘಟನೆಗಳು– ಕಾನೂನನ್ನು ಕೈಗೆ ತೆಗೆದುಕೊಂಡು ಮನಬಂದಂತೆ ವರ್ತಿಸುವ ಅಂಧಯುಗವನ್ನು ನೆನಪಿಗೆ ತಂದಿದೆ.

ಮಂಗಳೂರು ನಗರ ಹೊರವಲಯದ ಪಡೀಲ್ ಬಡ್ಲಗುಡ್ಡೆಯ ಹೋಮ್ ಸ್ಟೇ (ಅತಿಥಿ ಗೃಹ)ಯಲ್ಲಿ ತಮ್ಮ ಪಾಡಿಗೆ ತಾವು ಹುಟ್ಟು ಹಬ್ಬ ಆಚರಿಸಿಕೊಳ್ಳುತ್ತಿದ್ದ ಯುವಕ ಯುವತಿಯರ ಮೇಲೆ ಸುಮಾರು 20ಮಂದಿ ಇದ್ದ ಗುಂಪೊಂದು ದಾಳಿ ನಡೆಸಿದೆ. ಯುವತಿಯರನ್ನು ಹಿಗ್ಗಾಮುಗ್ಗಾ ಎಳೆದಾಡಿ ಥಳಿಸಿದ್ದಾರೆ. ಹೋಮ್ ಸ್ಟೇಯಲ್ಲಿ ಅನೈತಿಕ ಚಟುವಟಿಕೆ ನಡೆಯುತ್ತಿದ್ದುದನ್ನು ತಡೆಯಲು ಹೋಗಿದ್ದೆವು ಎಂದು ತಮ್ಮ ದುಷ್ಕೃತ್ಯವನ್ನು ಅವರು ಸಮರ್ಥಿಸಿಕೊಂಡಿದ್ದಾರೆ. ಈ ಕೃತ್ಯ ನಡೆದ ಸ್ಥಳಕ್ಕೆ ತಮ್ಮ ಸಹಚರರೊಂದಿಗೆ ಹೋಗಿದ್ದನ್ನು ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತ ಸುಭಾಷ್ ಪಡೀಲ್ ಒಪ್ಪಿಕೊಂಡಿದ್ದಾರೆ. ಆದರೂ ನಮ್ಮ ಸಂಘಟನೆ ದಾಳಿ ನಡೆಸಿಲ್ಲ ಎಂಬ ಸಮಜಾಯಿಷಿ ಅವರದು. ರಾಜ್ಯ ಸಂಚಾಲಕರದೂ ಅದೇ ಹಾಡು. 'ವೇದಿಕೆಯ ಕಾರ್ಯಕರ್ತರು ದಾಳಿ ನಡೆಸಿದ್ದಾರೆ ಎಂಬುದಕ್ಕೆ ಸಾಕ್ಷಿ ಏನು? ಅಲ್ಲಿ ನಮ್ಮ ಬ್ಯಾನರ್ ಅಥವಾ ಭಿತ್ತಿಪತ್ರಗಳಿದ್ದವೇ' ಎಂದು ಅವರು ಜಾರಿಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಆದರೆ ಇಡೀ ಘಟನಾವಳಿಯನ್ನು ಟಿವಿ ಕ್ಯಾಮೆರಾಗಳು ಸೆರೆ ಹಿಡಿದಿವೆ. ಅಂಗೈ ಹುಣ್ಣಿಗೆ ಕನ್ನಡಿ ಬೇಕೆ? ಎಂಬಂತೆ ಎಲ್ಲವೂ ಸುಸ್ಪಷ್ಟವಾಗಿದೆ. ಸ್ವತಃ ಹೈಕೋರ್ಟಿನ ಮುಖ್ಯ ನ್ಯಾಯಮೂರ್ತಿ ವಿಕ್ರಮಜಿತ್ ಸೇನ್ ಅವರು 'ಯುವಕ ಯುವತಿಯರ ಮೇಲೆ ದಾಳಿ ನಡೆಸಿದ ನೀಲಿ ಬಣ್ಣದ ಅಂಗಿ ಧರಿಸಿದ ವ್ಯಕ್ತಿ ಯಾರು? ಆತನ ವಿರುದ್ಧ ಏನು ಕ್ರಮ ಕೈಗೊಳ್ಳಲಾಗಿದೆ. ಏಳು ದಿನಗಳ ಒಳಗೆ ಮಾಹಿತಿ ನೀಡಿ' ಎಂದು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಹೋಮ್ ಸ್ಟೇ ಗಳಲ್ಲಿ ಅನೈತಿಕ ಚಟುವಟಿಕೆ ನಡೆದಿದೆ ಎಂದು ಕಾನೂನನ್ನು ಕೈಗೆ ತೆಗೆದುಕೊಂಡು ಹಲ್ಲೆ ನಡೆಸುವ ಹಕ್ಕನ್ನು ಇವರಿಗೆ ಕೊಟ್ಟವರಾರು? ಕರಾವಳಿ ಜಿಲ್ಲೆಗಳಲ್ಲಿ ಈ ರೀತಿಯ ಕೃತ್ಯ ಇದೇ ಮೊದಲಲ್ಲ. 2009ರ ಜನವರಿ 24ರಂದು ಪಬ್ ಮೇಲೆ ದಾಳಿಯೇ ಬೇರೊಂದು ರೂಪದಲ್ಲಿ ಈಗ ಮರುಕಳಿಸಿವೆ. ಆರೋಪಿಗಳಿಗೆ ಶಿಕ್ಷೆಯಾಗಿಲ್ಲ. ಸ್ಥಳೀಯ ರಾಜಕಾರಣಿಗಳ ಕೃಪೆ ಅವರ ಮೇಲಿದೆ. ಹಾಗಾಗಿ ರಂಗೋಲೆ ಕೆಳಗೆ ತೂರಿ ಪಾರಾಗಿ ಬಂದು ಮತ್ತೆ ಅಂತಹದೇ ಕೃತ್ಯಗಳಲ್ಲಿ ತೊಡಗಿದ್ದಾರೆ. ಪುಂಡರಿಗೆ ಸ್ಥಳೀಯ ರಾಜಕಾರಣಿಗಳ ಆಶೀರ್ವಾದ ಇದೆ ಎಂಬ ಕಾರಣಕ್ಕೆ ಪೊಲೀಸರೂ ನಿಷ್ಕ್ರಿಯರಾಗಿದ್ದಾರೆ. ಇಡೀ ಘಟನೆಯ ಹೊಣೆಯನ್ನು ಜಿಲ್ಲಾಡಳಿತ ಹೊರಬೇಕು ಎಂದು ಸ್ವತಃ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಸಿ.ಮಂಜುಳಾ ಅವರೇ ಆಗ್ರಹ ಪಡಿಸಿದ್ದಾರೆ.

ಪ್ರವಾಸೋದ್ಯಮಕ್ಕೆ ಸ್ಥಳೀಯರ ಪಾಲ್ಗೊಳ್ಳುವಿಕೆ ಇರಲಿ ಎಂಬ ಕಾರಣಕ್ಕೆ ಸರ್ಕಾರ ಹೋಮ್ ಸ್ಟೇಗಳನ್ನು ಉತ್ತೇಜಿಸುತ್ತಿದೆ. ಆದರೆ ಮೂಲ ಉದ್ದೇಶವೇ ಮರೆಯಾಗಿ ಸಿರಿವಂತರ ಮೋಜಿನ ಜೀವನಕ್ಕೆ ಬಳಕೆಯಾದದ್ದೂ ಇದೆ. ಪರವಾನಗಿ ಪಡೆಯದ ಹೋಮ್ ಸ್ಟೇಗಳೂ ಇವೆ. ಆದರೆ ಅವನ್ನೆಲ್ಲ ನೋಡಿಕೊಳ್ಳಲು ಸರ್ಕಾರದ ಕಾನೂನು ವ್ಯವಸ್ಥೆ ಇಲ್ಲವೆ? ಅದೆಲ್ಲ ಸತ್ತು ಹೋಗಿದೆಯೇ?

ರಾಜಕೀಯ ರಾಜಧಾನಿ ಹಾಗೂ ಸಾಂಸ್ಕೃತಿಕ ರಾಜಧಾನಿ ಬೆಂಗಳೂರು– ಮೈಸೂರು ಮಧ್ಯೆ ನಿತ್ಯ ಸಂಚರಿಸುವ ರೈಲುಗಳಲ್ಲಿ ಸಾವಿರಾರು ಜನ ಪ್ರಯಾಣಿಸುತ್ತಾರೆ. ರಾಜಧಾನಿಗಳ ಈ ಪಯಣಿಗರು ಎಚ್ಚೆತ್ತವರೇ ಆಗಿರುತ್ತಾರೆ ಎಂಬುದು ಒಂದು ಪ್ರತೀತಿ. ಎರಡು ವಾರಗಳ ಹಿಂದೆ ಬೆಂಗಳೂರಿನಿಂದ ಮೈಸೂರಿಗೆ ಹೊರಟ ರೈಲಿನಲ್ಲಿ ಪಯಣಿಸುತ್ತಿದ್ದ ಒಂಟಿ ಯುವತಿಯನ್ನು ಯುವಕರ ಗುಂಪೊಂದು ಕೆಣಕಿ, ಅನೈತಿಕ ಚಟುವಟಿಕೆಗೆ ಆಹ್ವಾನಿಸಿದೆ. ಆಕೆ ಅದನ್ನು ತಿರಸ್ಕರಿಸಿದ್ದರಿಂದ ಮದ್ದೂರು ಸಮೀಪದ ಶಿಂಷಾ ಸೇತುವೆ ಬಳಿ ಚಲಿಸುವ ರೈಲಿನಿಂದ ಕೆಳಕ್ಕೆ ದೂಡಿದೆ. ತೀವ್ರವಾಗಿ ಗಾಯಗೊಂಡ ಆಕೆ ಮಂಡ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನಂತರ ಚೇತರಿಸಿಕೊಂಡಿದ್ದಾಳೆ. ರೈಲಿನಲ್ಲಿ ಒಂಟಿ ಮಹಿಳೆಯ ಮೇಲೆ ನಡೆದ ದೌರ್ಜನ್ಯವನ್ನು ನೋಡಿಯೂ ನೋಡದಂತೆ ಕುಳಿತವರ ವರ್ತನೆಗೆ ಏನೆನ್ನಬೇಕು? ಧೃತರಾಷ್ಟ್ರನಂತೆ ಅವರೆಲ್ಲ ಸತ್ಯಕ್ಕೆ ಕುರುಡಾಗಿಬಿಟ್ಟರು. ಇಂದು ಮನುಷ್ಯ ಸುತ್ತಲಿನ ಘಟನೆಗಳಿಗೆ ಸ್ಪಂದಿಸುವುದನ್ನು ಕಳೆದುಕೊಳ್ಳುತ್ತಿದ್ದಾನೆಯೇ? ಸಾರ್ವಜನಿಕ ವಿವೇಕ ಸತ್ತು ಹೋಗಿದೆಯೇ? ತುಂಬಾ ಆತಂಕ ಹುಟ್ಟಿಸುವ ಸಂಗತಿ ಇದು.

■ ಗುಡಿಹಳ್ಳಿ ನಾಗರಾಜ


ವಿಷ್ಣು.